# ಕುಂದಾಪುರ ತಾಲೂಕು ಸ್ಥಾನಿಕ ಬ್ರಾಹ್ಮಣ ಸಂಘ (ರಿ) ಹೊಸ್ಕೋಟೆ - ವಾರ್ಷಿಕ ಅಧಿವೇಶನ

ಕುಂದಾಪುರ ತಾಲೂಕು ಸ್ಥಾನಿಕ ಬ್ರಾಹ್ಮಣ ಸಮಾಜದ ವಾರ್ಷಿಕ ಮಹಾಸಭೆಯು ದಿನಾಂಕ 17-02-2008ನೇ ಆದಿತ್ಯವಾರದಂದು ಆಜ್ರಿ ಇಳಲಿಯ ಶ್ರೀ ವೆಂಕಟಕೃಷ್ಣ ಹೆಗಡೆಯವರ ಮನೆಯಲ್ಲಿ ಸಂಘದ ಅಧ್ಯಕ್ಷರಾದ ಕಿರಿಮಂಜೇಶ್ವರ ಕೆ. ಉಮೇಶ ಶ್ಯಾನುಭೋಗ್ ಇವರ ಅಧ್ಯಕ್ಷತೆಯಲ್ಲಿ ಜರುಗಿತು. ಉದ್ಘಾಟನೆಯನ್ನು ಶ್ರೀ ವೆಂಕಟಕೃಷ್ಣ ಹೆಗಡೆ ನೆರವೇರಿಸಿದರು. ಶ್ರೀಮತಿ ಶಾಂತಾ ಗಣೇಶರವರು ಎಲ್ಲರನ್ನು ಸ್ವಾಗತಿಸಿದರು. ಪತ್ರಕರ್ತರು, ಸಾಹಿತಿಗಳಾದ ಶ್ರೀ ಈಶ್ವರಯ್ಯನವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಸಂದರ್ಭೋಚಿತವಾಗಿ ಉಪನ್ಯಾಸ ನೀಡಿದರು. ಶ್ರೀ ಕೆ.ಜಿ. ವಿಷ್ಣುಮೂರ್ತಿ ಕಂಬದಕೋಣೆ ಇವರು ಸಮಾಜದ ಪ್ರತಿಭಾನ್ವಿತ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಪ್ರತಿಭಾ ಪುರಸ್ಕಾರ ನೆರವೇರಿಸಿದರು. ಸಮಾಜದ ಹಿರಿಯರಾದ ಶ್ರೀ ಗೋಪಾಲಕೃಷ್ಣ ಹೆಬ್ಬಾರ್ ಅಬ್ಲಕಟ್ಟೆ, ಶ್ರೀಮತಿ ಭಾಗೀರಥಿ ಅಮ್ಮ ಬೇಳೂರು, ಶ್ರೀಮತಿ ರತ್ನಮ್ಮ ಬೈಂದೂರು ಇವರನ್ನು ಸಂಘದ ವತಿಯಿಂದ ಸನ್ಮಾನಿಸಲಾಯಿತು. ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ರವೀಂದ್ರ ದೊಡ್ಮನೆಯವರು ವಂದನಾರ್ಪಣೆ ಸಲ್ಲಿಸಿದರು. ಶ್ರೀ ಸುಬ್ರಹ್ಮಣ್ಯ ಜೋಷಿಯವರು ಕಾರ್ಯಕ್ರಮ ನಿರ್ವಹಣೆ ಮಾಡಿದರು. ಸಂಘದ ಅಧ್ಯಕ್ಷರಾದ ಕೆ. ಉಮೇಶ್ ಶ್ಯಾನುಭೋಗರು ಈ ಸಂದರ್ಭದಲ್ಲಿ ಮಾತನಾಡಿ ಸಂಘ ಸಂಘಟನೆ ನಮಗೆ ಯಾಕೆ ಬೇಕು? ಸಂಘದಿಂದ ನಮಗೆ ಉಪಯೋಗವೇನು? ಎಂಬುವುದನ್ನು ವಿವರಿಸಿ, ಇತರ ವರ್ಗದವರಿಂದ ಬರುವ ಒತ್ತಡಗಳನ್ನು ಪ್ರತಿಭಟಿಸಿ ವಿರೋಧಿಸುವಂತೆ ಹಾಗೂ ಸಂಘವನ್ನು ಇನ್ನಷ್ಟು ಬಲಪಡಿಸುವಂತೆ ಎಲ್ಲಾ ಸದಸ್ಯರು ಒಗ್ಗೂಡಿ ಪ್ರಯತ್ನಿಸಬೇಕೆಂದು ಕರೆ ನೀಡಿದರು. ಮಧ್ಯಾಹ್ನ ಶ್ರೀ ವೆಂಕಟಕೃಷ್ಣ ಹೆಗಡೆ ಮತ್ತು ಅವರ ಮನೆಯವರಿಂದ ಪುಷ್ಕಳ ಭೋಜನದ ಅತಿಥ್ಯ ಸ್ವೀಕರಿಸಿದ ಸಮಾಜ ಬಾಂಧವರು ಮನೆಯವರಿಗೆ ಶುಭ ಹಾರೈಸಿದರು. ಸಂಘದ ಅಧ್ಯಕ್ಷರಾದ ಕೆ. ಉಮೇಶ ಶ್ಯಾನುಭೋಗ್ ಮತ್ತವರ ಪತ್ನಿ ಶ್ರೀಮತಿ ಪುಷ್ಪಲತಾ ಶ್ಯಾನುಭೋಗ್ ಇವರು ಶ್ರೀ ವೆಂಕಟಕೃಷ್ಣ ಹೆಗಡೆಯವರಿಗೆ ಶಾಲು ಹೊದಿಸಿ ಅವರ ಮನೆಯವರಿಗೆ ಸ್ಮರಣಿಕೆಯನ್ನು ನೀಡಿ ಸತ್ಕರಿಸಿದರು.

ಭೋಜನಾ ನಂತರ ಸಮಾಜದ ಮಕ್ಕಳಿಗೆ, ಮಹಿಳೆಯರಿಗೆ, ಹಿರಿಯರಿಗೆ ಸ್ಪರ್ಧೆಗಳನ್ನೂ ಮನೋರಂಜನಾ ಕಾರ್ಯಕ್ರಮವನ್ನೂ ನೆರವೇರಿಸಲಾಯಿತು.

ಮಧ್ಯಾಹ್ನ ಸಂಘದ ವಾರ್ಷಿಕ ಅಧಿವೇಶನ ಮತ್ತು ಸಮಾರೋಪ ಸಮಾರಂಭ ನಡೆಯಿತು. ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷರಾದ ಕೆ. ಉಮೇಶ ಶ್ಯಾನುಭೋಗ್ ವಹಿಸಿದ್ದರು. ಭಾರತಿ ಮತ್ತು ದಿವ್ಯ ಇವರು ಪ್ರಾರ್ಥನೆ ಮಾಡಿದರು. ಶ್ರೀಮತಿ ಕೃಷ್ಣವೇಣಿ ಸಿದ್ಧಾಪುರ ಇವರು ಸ್ವಾಗತಿಸಿದರು. ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ರವೀಂದ್ರ ದೊಡ್ಮನೆ ವರದಿ ವಾಚಿಸಿದರು. ಕೋಶಾಧಿಕಾರಿ ಕೆ. ಬಾಲಕೃಷ್ಣ ಶ್ಯಾನುಭೋಗ್ ಆಯವ್ಯಯ ಪತ್ರವನ್ನು ಮತ್ತು ಮುಂಗಡ ಪತ್ರವನ್ನು ಮಂಡಿಸಿದರು. ಕುಂದಾಪುರ ತಾಲೂಕು ದ್ರಾವಿಡ ಬ್ರಾಹ್ಮಣ ಪರಿಷತ್ತಿನ ಪ್ರಧಾನ ಕಾರ್ಯದರ್ಶಿಗಳಾದ ವಿದ್ವಾನ್ ಶ್ರೀ ಮಾಧವ ಅಡಿಗರು ಮುಖ್ಯ ಅಭ್ಯಾಗತರಾಗಿ ಭಾಗವಹಿಸಿದ್ದು ಬ್ರಾಹ್ಮಣರು ಅವರ ಸಂಘಟನೆ ಮತ್ತು ಸಂಘದ ಅವಶ್ಯಕತೆಯ ಕುರಿತು ಹೆಚ್ಚಿನ ಮಾಹಿತಿ ನೀಡಿದರು. ಕುಂದಾಪುರ ತಾಲೂಕು ಸ್ಥಾನಿಕ ಬ್ರಾಹ್ಮಣರ ಕಾರ್ಯ ಚಟುವಟಿಕೆಗಳು ಮತ್ತು ಮಹಾ ಸಭೆಯಲ್ಲಿ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ ಸಮಾಜ ಬಾಂಧವರ ಬಗ್ಗೆ ಮೆಚ್ಚುಗೆ ವ್ಯಕ್ತ ಪಡಿಸಿದರು.

ಶಂಕರನಾರಾಯಣ ಹಾಲು ಉತ್ಪಾದಕರ ಸಂಘದ ಪ್ರಧಾನ ಕಾರ್ಯದರ್ಶಿಗಳಾದ ನಮ್ಮ ಸಮಾಜ ಬಾಂಧವರೇ ಆದ ಶ್ರೀ ದಯಾನಂದರಾವ್ ಇವರು ಆರ್ಥಿಕ ಪರಿಸ್ಥಿತಿಯಲ್ಲಿ ಬಹಳ ಹಿಂದುಳಿದಿರುವ ಸಮಾಜದ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ವಿದ್ಯಾರ್ಥಿ ವೇತನ ವಿತರಿಸಿದರು. ಸಂಘದ ಅಧ್ಯಕ್ಷರು ಆ ದಿನದ ಆಟೋಟ ಸ್ಪರ್ಧಾಕಾರ್ಯಕ್ರಮಗಳಲ್ಲಿ ವಿಜೇತರಾದ ಎಲ್ಲರಿಗೂ ಸಂಘದ ವತಿಯಿಂದ ಬಹುಮಾನ ವಿತರಣೆ ಮಾಡಿದರು. ಸ್ಥಾಪಕ ಅಧ್ಯಕ್ಷ ಎಚ್. ಹಿರಿಯಣ್ಣರಾವ್, ಉಪಾಧ್ಯಕ್ಷ ಪಿ. ಶೇಷಪಯ್ಯ ಉಪಸ್ಥಿತರಿದ್ದರು. ಯುವ ವೇದಿಕೆ ಅಧ್ಯಕ್ಷ ಎಚ್. ವೆಂಕಟೇಶರಾವ್, ಮಹಿಳಾ ವೇದಿಕೆ ಅಧ್ಯಕ್ಷೆ ಶ್ರೀಮತಿ ಶಾಂತಾಗಣೇಶ್‌ರಾವ್, ಕಾರ್ಯದರ್ಶಿ ಶ್ರೀಮತಿ ಸುಮಾ ಅರುಣ ಶ್ಯಾನುಭೋಗ್, ಮಂಜುನಾಥ ಹೆಬ್ಬಾರ್ ಉಪ್ಪಿನಕುದ್ರು ಇವರು ಸಾಂಸ್ಕೃತಿಕ ಕಾರ್ಯಕ್ರಮಗಳು ಮತ್ತು ಆಟೋಟ ಸ್ಪರ್ಧೆಗಳ ನೇತೃತ್ವ ವಹಿಸಿದರು. ಶ್ರೀ ಲಕ್ಷ್ಮೀನಾರಾಯಣ ರಾವ್ ಕಾರ್ಯಕ್ರಮ ನಿರ್ವಹಿಸಿದರು.

ಮುಂದಿನ ಮಹಾಸಭೆಯು ದಶಂಬರ ಕೊನೆವಾರದಲ್ಲಿ ಸಂಘದ ಉಪಾಧ್ಯಕ್ಷರಾದ ಬೈಂದೂರಿನ ಪಿ. ಶೇಷಪ್ಪಯ್ಯನವರ ಮನೆಯಲ್ಲಿ ನಡೆಯಲಿದೆ ಎಂದು ಮಹಾಸಭೆಯ ಕೊನೆಯಲ್ಲಿ ಘೋಷಿಸಲಾಯಿತು. ಎಲ್ಲರೂ ಕರತಾಡನದಿಂದ ಸ್ವಾಗತಿಸಿದರು.

**-ವರದಿ ಸಂಘದ ಅಧ್ಯಕ್ಷರಿಂದ**

## ಅನುಭವ.....

(...2ನೇ ಪುಟದಿಂದ)

ಈ ಅರಿವು ಮತ್ತೆ ವೃತ್ತಿರೂಪವಾಗುವುದಿಲ್ಲ. ಆದುದರಿಂದ ಭೌತಿಕವಾಗಿ ಈ ಅರಿವನ್ನು ಪಡೆಯಲಾಗುವುದಿಲ್ಲ. ಈ ಅರಿವಿನ ಅನುಭವವು ಕೂಡಾ ಅರಿವೇ ಆಗಿರುತ್ತದೆ. ಅಂದರೆ ಆತ್ಮನನ್ನು ಅರಿಯುವ ಇನ್ನೊಂದಿಲ್ಲ. ಆತ್ಮನನ್ನು ಆತ್ಮನೇ ಅರಿಯುತ್ತದೆ. ಬಲ್ಬಿನ ಬೆಳಕು ಮತ್ತೆ ನೀರಾಗಿ ಬದಲಾವಣೆಯಾಗುವುದಿಲ್ಲ. ಪ್ರವಹಿಸುವ ನೀರಿನಲ್ಲಿದ್ದ ಶಕ್ತಿ ಹಲವಾರು ರೂಪಾಂತರಗೊಂಡು ಬೆಳಕಾಗಿ ಕಂಡಿತು. ಆದರೆ ನೀರೇ ವಿದ್ಯುತ್ ಅಲ್ಲ. ಮತ್ತು ವಿದ್ಯುತ್ತೇ ಬೆಳಕಲ್ಲ. ಬೆಳಕು ಎಲ್ಲಿಂದ ಬಂತು?

ಹಾಗೆನೇ ವೃತ್ತಿಯೇ ಬೆಳಕಲ್ಲ. ವೃತ್ತಿಯೇ ಮನಸ್ಸೂ ಅಲ್ಲ. ಮನಸ್ಸೇ ಅರಿವೂ ಅಲ್ಲ. ಮತ್ತೆ ಅರಿವಿನ ಅನುಭವ ಹೇಗಾಯಿತು? ಅದು ಒಂದು ಭೌತಿಕ ಬೆಳಕಲ್ಲದ ಬೆಳಕು. ಅದನ್ನು ಅರಿಯುವ ಬೆಳಕೇ ನಾನು ಅಂದರೆ ಆತ್ಮ. ಆದುದರಿಂದ ಬೆಳಕು, ನಾನು, ಆತ್ಮ ಎಂಬುವುಗಳನ್ನು ಪ್ರತ್ಯೇಕಿಸಿ ಅರಿಯಲಾಗುವುದಿಲ್ಲ. ಆದುದರಿಂದ ಅರಿವೇ ಆತ್ಮ. ಅದೇ ಅನುಭವ ಮತ್ತು ಆ ಅನುಭವದ ಅನುಭವಿ ಕೂಡಾ. ''ಆತ್ಮಸ್ವರೂಪವು ಆಕಾಶದ ಲಕ್ಷಣದಲ್ಲಿದೆ. ಆತ್ಮವು ಯಾವುದೋ ಗೊತ್ತಿಲ್ಲದ, ವಿವರಣೆಯಿಲ್ಲದ ಜ್ಯೋತಿಯಂತೆ ಪ್ರಕಾಶಿಸುತ್ತದೆ. ಅಂಗುಷ್ಠ ಮಾತ್ರನಾದ ಆತ್ಮನು ಹೊಗೆಯಿಲ್ಲದ ಜ್ಯೋತಿಯಂತೆ ಇರುತ್ತಾನೆ. ಶವನು ಸೂರ್ಯನಂತೆ ತೇಜಸ್ಸಿನಂತೆ ತಪಿಸುತ್ತಾನೆ. ಅಗ್ನಿಯಂತೆ ಬೆಳಗುತ್ತಾನೆ, ಪ್ರಕಾಶಿಸುತ್ತಾನೆ, ಅನುಭವಕ್ಕೆ ಬರುತ್ತಾನೆ. ಆಶ್ಚರ್ಯದಂತೆ ಕಾಣುತ್ತಾನೆ''. ಇವು ನಮಗೆ ಅರಿವಿನ ಅನುಭವ ನೀಡುವ ಉಪಪತ್ತಿನ ವಿವರಣೆಗಳು. ಯಾಕೆಂದರೆ ಅನುಭವವನ್ನು ವಿವರಿಸುವ ಮನಸ್ಸಾಗಲೀ, ಮಾತಾಗಲೀ ನಮಗಿಲ್ಲ. ವೈಜ್ಞಾನಿಕ ಅವಿಷ್ಕಾರಗಳೆಲ್ಲಾ ವಿಜ್ಞಾನಿಯೊಳಗಿನ ಅರಿವು ಎಂಬ ಈ ಬೆಳಕಿನಿಂದಲೇ ಆಗಿರುತ್ತವೆ ಆ ಬೆಳಕಿನ ಅನುಭವವೇ ವಿಜ್ಞಾನ. ಆತ್ಮವೆಂದರೆ ವಸ್ತು ತಂತ್ರವಲ್ಲ. ಅದೊಂದು ಎಸೋಸಿಯೇಷನ್ ಎಂಬ ತರ್ಕವೂ ಇದೆ. ಎಸೋಸಿಯೇಷನ್ ಎಂದರೆ ನಮ್ಮ ಹಿಂದಿನ ಅನುಭವ ಜ್ಞಾಪಕಗಳನ್ನು ಕಲೆ ಹಾಕಿ ಈಗಿನ ಸಮಸ್ಯೆಗೆ ಪ್ರತಿಕ್ರಯಿಸುವ ಒಂದು ಕಾರ್ಯ ಮಾತ್ರ, ಕೇವಲ ಅದು ಒಂದು ಕಾರ್ಯ ಕಾರಣ ಸಂಘಾತವೆಂದು ಅರ್ಥ ''ಹೀಗಾದರೆ ಹೀಗೆ'' ಎಂದು ನಿರ್ಣಯಿಸುವ ಒಂದು ತರ್ಕಬದ್ಧ ನಿಲುವು, ಅಥವಾ ಒಂದು ಪರಿಣಾಮವೆಂದು ಅರ್ಥೈಸುವವರು ಯಾರು? ಎಸೋಸಿಯೇಷನ್ ಎಂದು ಆತ್ಮನನ್ನು ಗುರುತಿಸುವಾಗ ಅದನ್ನು ಒಂದು ಅರಿವು, ಅರ್ಥೈಸುವ ವಸ್ತುಕೇಂದ್ರವೆಂದು ತಿಳಿಯಲು ಸಾಧ್ಯವಿಲ್ಲ. ಒಂದು ಆಕ್ಶನ್‌ಗೆ ಸ್ವಾಭಾವಿಕವಾಗಿ ಒದಗಲೇ ಬೇಕಾದ ರಿಯಾಕ್ಶನ್ ಎಂದು ಗುರುತಿಸಿದಂತೆ ಮಾತ್ರ ಆಗುತ್ತದೆ.

(ಮುಂದಿನ ಸಂಚಿಕೆಯಲ್ಲಿ....)

## ಕ್ರೌಂಚವಧೆ (ಪೌರಾಣಿಕ ಕಥೆ)

(...2ನೇ ಪುಟದಿಂದ)

ವಿಜೃಂಭಿಸಿ ರೆಕ್ಕೆಗಳನ್ನು ಪಟಪಟನೆ ಬಡಿದು ಸಂಭ್ರಮಿಸುವುದು; ಸೇರಿಸಿ ಮುದ್ದಿಸಿ ಒಂದು ಇನ್ನೊಂದನ್ನು ರಮಿಸುವುದು; ಒಟ್ಟಿನಲ್ಲಿ ಸುಖದ ಮಧುರ ಸಂವೇದನೆಯಲ್ಲಿ ಜಗತ್ತನ್ನೇ ಮರೆತು ಸಂಭ್ರಮಿಸುತ್ತಿದ್ದವು.

ಮಹರ್ಷಿಗಳು ಈ ಮಿಲನದ ದೃಶ್ಯವನ್ನು ಕಾಣುತ್ತಿರುವಂತೆಯೇ ಒಂದು ಭೀಕರ ದುರ್ಘಟನೆ ಸಂಭವಿಸಿತು. ಎಲ್ಲಿಂದಲೋ ರೊಯ್ಯನೆ ತೂರಿ ಬಂದ ಬಾಣವೊಂದು ಗಂಡು ಕ್ರೌಂಚದ ಶರೀರವನ್ನು ಭೇದಿಸಿ ರಕ್ತದ ಕೋಡಿಯನ್ನು ಹರಿಸಿತು. ಪಕ್ಷಿಯ ''ಕ್ರೀನ್, ಕ್ರೀನ್, ಕ್ರೀನ್'' ಎಂಬ ಮರಣಾಂತಿಕವಾದ ಆಕ್ರಂದನ ವನವನ್ನೆಲ್ಲಾ ಆವರಿಸಿ ಮಾರ್ದನಿಗೊಂಡಿತು. ಕೆಡೆದ ಪಕ್ಷಿಯು ವೇದನೆ ಭರಿಸಿಕೊಳ್ಳಲಾರದೆ ಕಾಲುಗಳನ್ನು ಒಗೆದೊಗೆದು ಗೋಣನ್ನು ಪಕ್ಕಕ್ಕೆ ಚೆಲ್ಲಿ ಮರಣಾಪನ್ನವಾಯಿತು. ಹೆಣ್ಣು ಪಕ್ಷಿಯು ಮರದ ಬುಡಕ್ಕೆ ಹಾರಿತು; ಮರಳಿ ಪ್ರಿಯತಮನಿದ್ದಲ್ಲಿಗೇ ಬಂದು ರೆಕ್ಕೆಗಳನ್ನು ಪಟ ಪಟನೆ ಬಡಿದು ಗಾಳಿ ಬೀಸಿ ಶೈತ್ಯೋಪಚಾರವೆಸಗಿತು.

ಆಕಸ್ಮಿಕವಾಗಿ ಘಟಿಸಿದ ದುರ್ಘಟನೆಯಿಂದ ಘಾಸಿಯಾಗಿ ಮತಿವಿಕಲ್ಪಗೊಂಡು ''ಪ್ರಿಯಕರನೇ, ಇನ್ನೂ ಏಕೆ ಮಲಗಿರುವೆ? ಏಳು ಎದ್ದೇಳು ಈಗ ತಾನೇ ನಮ್ಮ ಸಮಾಗಮವಾಗಿದೆ. ಗೂಡೊಂದನ್ನು ನಾವು ರಚಿಸಬೇಡವೇ? ಅಂಡಗಳನ್ನು ರಕ್ಷಿಸಿ ಹೊರಬರುವ ನಮ್ಮ ಪುಟಾಣಿಗಳನ್ನು ಲಾಲಿಸಿ ಪಾಲಿಸಬೇಕಲ್ಲವೇ?'' ಎಂದು ತನ್ನ ಪಕ್ಷಿಭಾಷೆಯಲ್ಲಿ ದೆಸೆಗಳೂ ಕರಗುವಂತೆ ಚೀತ್ಕರಿಸಿ ಬೋರಿಡುತ್ತಾ ಶುಷ್ಕ ಪರ್ಣ ರಾಶಿಗಳ ಮೇಲೆ ತಕತಕನೆ ಕುಣಿದು ಕುಪ್ಪಳಿಸಿ ಶೋಕದಿಂದ ಹೊರಳಾಡಿತು. ಈ ಹೃದಯ ವಿದ್ರಾವಕ ದೃಶ್ಯವನ್ನು ಕಂಡು ವಾಲ್ಮೀಕಿಯವರ ಕಣ್ಣುಗಳಿಂದ ದಳ ದಳನೆ ಅಶ್ರುಧಾರೆಗಳುರುಳಿದವು.

ಅಷ್ಟರಲ್ಲಿ ಪೊದೆಗಳ ಮರೆಯಿಂದ ಬಿಲ್ಲುಬಾಣಗಳನ್ನು ಧರಿಸಿದ ಬೇಡನೊಬ್ಬನು ತಾನು ಘನ ಕಾರ್ಯವೊಂದನ್ನು ಸಾಧಿಸಿದೆನೆಂಬ ಹಮ್ಮಿನಿಂದ ಮುಗುಳ್ನಗುತ್ತಾ ಈಚೆಗೆ ನಡೆದು ಬಂದನು. ಅವನು ಹೆದೆಗೆ ಬಾಣವನ್ನೇರಿಸಿ ಇನ್ನೇನು ಉಳಿದ ಹೆಣ್ಣು ಕ್ರೌಂಚವನ್ನೂ ಕೊಲ್ಲುವ ಸನ್ನಾಹದಲ್ಲಿದ್ದನು. ಭಾವ ಪರವಶತೆಗೆ ಒಳಗಾದ ಮಹರ್ಷಿಗಳು ''ತಡೆ, ತಡೆ'' ಎಂದು ಕೈಯಿಂದಲೇ ಸಂಜ್ಞೆ ಮಾಡಿ ಅಸ್ಖಲಿತ ವಾಣಿಯಿಂದ ಬೇಡನಿಗೆ ಈ ರೀತಿಯಲ್ಲಿ ಶ್ಲೋಕ ರೂಪದ ಶಾಪವೊಂದನ್ನು ನೀಡಿದರು

ಮಾ ನಿಷಾದ ಪ್ರತಿಷ್ಠಾಂ ತ್ವಮಗಮಃ ಶಾವತೀಃ ಸಮಾಃ ।

ಯತ್ಕ್ರೌಂಚ ಮಿಥುಣಾ ದೇಕಮವಧೀಃ ಕಾಮದೋಹಿತಮ್ ॥

ತಾತ್ಪರ್ಯ : 'ಎಲೇ ಬೇಡನೇ ಪ್ರೀತಿಯಿಂದ ಇರುವ ಎರಡು ಕ್ರೌಂಚ ಪಕ್ಷಿಗಳಲ್ಲಿ ಒಂದನ್ನು ಕೊಂದಿದ್ದೀಯಾ. ಇದರಿಂದಾಗಿ ನೀನು ಅನೇಕ ಕಾಲದ ವರೆಗೆ ಒಳ್ಳೆಯದನ್ನು ಕಾಣುವುದಿಲ್ಲ. (ನೀನು ಕೂಡಲೇ ಸಾವನ್ನಪ್ಪು ಎಂಬ ಅರ್ಥವೂ ಇದೆ)

ಹೀಗೆ ವಿಶ್ವದ ಮೊಟ್ಟ ಮೊದಲ ಶ್ಲೋಕವು ಛಂದೋಬದ್ಧವಾಗಿ ಮಹರ್ಷಿಗಳ ಶ್ರೀ ಮುಖದಿಂದ ಹೊರಹೊಮ್ಮಿತು. ಅನಂತರ ವಾಲ್ಮೀಕಿ ಋಷಿಗಳು ನದೀತೀರದಲ್ಲಿ ಆಹ್ನಿಕಗಳನ್ನು ತೀರಿಸಿ ಶಿಷ್ಯನೊಡನೆ ಆಶ್ರಮಕ್ಕೆ ಮರಳಿದರು. ಆಶ್ರಮಕ್ಕೆ ಹಿಂದಿರುಗಿದ ಮೇಲೆ ಎಷ್ಟು ಪ್ರಯತ್ನಿಸಿದರೂ ಮಹರ್ಷಿಗಳಿಗೆ ವೇದಪಾರಾಯಣ, ಧ್ಯಾನಾದಿಗಳಲ್ಲಿ ಮನಸ್ಸನ್ನು ತೊಡಗಿಸಿಕೊಳ್ಳಲು ಸಾಧ್ಯವಾಗಲಿಲ್ಲ. ನಾರದರು ಬೋಧಿಸಿದ ರಾಮಾಯಣದ ಕಥೆ, ತದನಂತರದ ಕ್ರೌಂಚವಧೆಯ ಪ್ರಸಂಗಗಳು ಪ್ರಂಖಾನು ಪುಂಖವಾಗಿ ಚಿತ್ತದ ಭಿತ್ತಿಯಲ್ಲಿ ಮೂಡಿ ಬರುತ್ತಿದ್ದವು. ಎಂದೂ ರಾಗದ್ವೇಷಗಳಿಗೆ ಒಳಗಾಗದ ತಾವು ಬೇಟೆಯೇ ಜೀವನಾಧಾರವಾಗಿರುವ ಬೇಡನೊಬ್ಬನನ್ನು ಶಪಿಸಿದ್ದು ಸರಿಯೇ? ಅಥವಾ ಶ್ರೀ ರಾಮನ ಕಥೆಗೂ ಈ ಕ್ರೌಂಚ ವಧೆಯ ಪ್ರಸಂಗಕ್ಕೂ ಏನಾದರೂ ಕಾರ್ಯಕಾರಣ ಸಂಬಂಧವಿರಬಹುದೇ? ಎಂದು ಚಿಂತಿತರಾದರು.

ಆ ವೇಳೆಗೆ ಪರಮಪಿತ ಚತರ್ಮುಖ ಬ್ರಹ್ಮದೇವರು ಮಹರ್ಷಿಗಳಿಗೆ ಪ್ರತ್ಯಕ್ಷರಾಗಿ ''ವಾಲ್ಮೀಕಿ ಋಷಿವರ್ಯರೇ, ನಿಮ್ಮ ಮನಸ್ಸಿನ ಆಂದೋಲನವನ್ನು ನಾನು ಗುರುತಿಸಿರುವೆನು. ಈ ಮಧ್ಯಾಹ್ನ ನೀವು ಶೋಕಿತರಾಗಿ ಶ್ಲೋಕ ರೂಪದಲ್ಲಿ ಬೇಡನಿಗೆ ಕೊಟ್ಟ ಶಾಪ ಛಂದೋಬದ್ಧವಾಗಿ ಮೂಡಿಬರುವಂತೆ ಅನುಗ್ರಹಿಸಿದವನು ನಾನೇ. ಈ ಶ್ಲೋಕವೇ ಶ್ರೀ ರಾಮನ ಪುಣ್ಯ ಕಥೆಗೆ ನಾಂದಿಯಾಗಲಿ. ಶ್ರೀ ರಾಮಾಯಣ ಮಹಾಕಾವ್ಯವನ್ನು ಮನೋಹರವಾಗಿ ಶ್ಲೋಕರೂಪದಲ್ಲಿ ವಿಶದವಾಗಿ ಬರೆಯಿರಿ. ನಿಮಗೆ ಸತ್ಯ ದರ್ಶನದೊಂದಿಗೆ ಭಾವ ಸ್ಫುರಣೆಯಾಗುವಂತೆ ಅನುಗ್ರಹಿಸುವೆನು. ಶ್ರೀ ರಾಮ ಚರಿತ್ರೆಯ ಮಹಾಕಾವ್ಯವು ಪುಣ್ಯ ಕಾವ್ಯವೂ ಆಗಿ ಆಚಂದ್ರಾರ್ಕವೂ ಜನರು ಭಕ್ತಿಯಿಂದ ಪಠಿಸುವಂತಾಗಲಿ. ಶ್ರೀ ರಾಮಾಯಣ ಮಹಾಕಾವ್ಯವನ್ನು ಬರೆದು ನೀವು ಆದಿಕವಿ ಎನ್ನಿಸಿಕೊಳ್ಳುವಿರಿ. ನಿಮಗೆ ಶುಭವಾಗಲಿ ಎಂದು ಹರಸಿ ಅಂತರ್ಧಾನರಾದರು.

ನಾರದರು ನುಡಿದ ಕಥೆಯನ್ನು ಮಹರ್ಷಿಗಳು ಕ್ರಮಬದ್ಧವಾಗಿ ನವರಸಗಳೂ ಪಡಿಮೂಡುವಂತೆ ಇಪ್ಪತ್ತನಾಲ್ಕು ಸಾವಿರ ಶ್ಲೋಕಗಳಲ್ಲಿ ಪರಿಪೂರ್ಣತೆಯಿಂದ ವಿಸ್ತರಿಸಿ ಬರೆದರು. ಆದಿಕವಿಯಿಂದ ಪ್ರಾದುರ್ಭವವಾದ ಈ ರಾಮಾಯಣ ಮಹಾಕಾವ್ಯವು ಮುಂದೆ ಸಾವಿರಾರು ಕವಿಗಳಿಗೆ ಸ್ಫೂರ್ತಿಯನ್ನು ನೀಡಿ ಇಂದಿಗೂ ಜನಮಾನಸದಲ್ಲಿ ನೆಲೆನಿಂತು ಪ್ರಭಾವ ಬೀರುತ್ತಿದೆ. ಭಾರತೀಯರಿಗೆ ಪರಮ ಪವಿತ್ರ ಪುಣ್ಯ ಗ್ರಂಥವಾಗಿದೆ.

Krishna Rao

Ph : 2552560
Mob. : 92422 02118



KISHAN



Studio & Video

Indoor Photography & Port Folio Photography,
Video & Mixing, Lamination

MAIN ROAD, MAJOOR & BANTAKAL.

ರಾಮಾ ಅಟೋಮೊಬೈಲ್ಸ್

ಮಾರುತಿ ವಾಹನ ತಜ್ಞರು

ಮಲೆಮಾರ್ ರಸ್ತೆ, ಕೊಟ್ಟಾರ ಚೌಕಿ, ಮಂಗಳೂರು - 575 006.

ಫೋನ್ : 2454355, ಮೊಬೈಲ್ : 94485 45702



ಪ್ರೊ : ಯು. ಸಂತೋಷ ಕುಮಾರ್, ಉಜ್ಜೋಡಿ

